ಡ್ಯಾಮೇಜ್ ಆಗಿಲ್ಲ ಅಂತಹ ಸಬ್ ಡಿವಿಜನ್‌ಗಳಲ್ಲಿ ೧೦ಲಕ್ಷ ರೂಪಾಯಿಗಳನ್ನು ಬಿಲ್ ಮಾಡಿ ತೆಗೆದುಕೊಂಡಿದ್ದಾರೆ; ಕೆಲಸ ಆಗದೆ ಇಂಜಿನಿಯರ್‌ಗಳು ಬಿಲ್ ಮಾಡಿ ಅವರೇ ಹಣವನ್ನು ತೆಗೆದುಕೊಂಡಿದ್ದಾರೆನ್ನುವ ಆಪಾದನೆಯನ್ನು ಅವರು ಮಾಡುತ್ತಿದ್ದಾರೆ. ಅಲ್ಲಿ ಸ್ಪಷ್ಟವಾಗಿ ಕೆಲಸ ಆಗಿದೆಯೇ ಕೆಲಸ ಆಗದಿದ್ದರೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಇದನ್ನು ಪುನಃ ಲೋಕಾಯುಕ್ತಕ್ಕೆ ಕಳುಹಿಸಿ ಎನ್‌ಕ್ವಾಯರಿ ಮಾಡಿಸುತ್ತೀರಾ ಹೇಗೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಗುರುತರವಾದ ಆಪಾದನೆಗಳು ಬಂದರೆ ಲೋಕಾಯುಕ್ತಕ್ಕೆ ಕಳುಹಿಸುವ ವ್ಯವಸ್ಥೆಯನ್ನು ಮಾಡಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶಾಸಕರು ಹೇಳುತ್ತಿದ್ದಾರೆ, ಮತ್ತಾರು ಹೇಳಬೇಕು ? ಎಲ್ಲರೂ ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ ೨೨-೩-೯೦ರ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ ಮತ್ತು ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ ಮತ್ತು ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ

೯೮. ಶ್ರೀ ಜಿ. ರಾಜೂಗೌಡ(ಹನೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಮಿಳುನಾಡಿನ ರೈತರ ಬೆಳೆ ರಕ್ಷಿಸಲು ಯಾವ ಷರತ್ತುಗಳ ಮೇಲೆ ಕಾವೇರಿ ನೀರನ್ನು ಬಿಡಲಾಗುತ್ತಿದೆ.

ಆ) ೧೯೮೭ರಿಂದ ಇಲ್ಲಿಯವರೆಗೆ ಎಷ್ಟು ಟಿ. ಎಂ. ಸಿ. ನೀರನ್ನು ಬಿಡಲಾಗಿದೆ.

ಇ) ಇದಕ್ಕಾಗಿ ನೀವು ಪಡೆದಿರುವ ಪ್ರತ್ಯುಪಕಾರವೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕರ್ನಾಟಕದಿಂದ ಬಿಡುಗಡೆ ಮಾಡಿದ ಕಾವೇರಿ ನೀರಿನ ಬದಲು ತಮಿಳುನಾಡಿನಿಂದ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂಬ ಷರತ್ತಿನ ಮೇಲೆ ಹಾಗೂ ಅಕ್ಕ ಪಕ್ಕದ ರಾಜ್ಯಗಳ ಸೌಹಾರ್ದಯುತ ಸಂಬಂಧ ಹೊಂದಿರಬೇಕೆಂಬ ನಿಲುವಿನಿಂದ ಬಿಡಲಾಗುತ್ತಿದೆ.

ಆ) ೩೦.೬೧ ಟಿಎಂಸಿ

ಇ) ಈವರೆಗೆ ತಮಿಳುನಾಡು ೧೭೭.೫೪೮ ಮಿ. ಯೂನಿಟ್ ವಿದ್ಯುಚ್ಛಕ್ತಿಯನ್ನು ಒದಗಿಸಿದೆ. ಇನ್ನೂ ಕೊಡಬೇಕಾಗಿರುವ ವಿದ್ಯುಚ್ಛಕ್ತಿಯ ಬಗ್ಗೆ ವ್ಯವಹರಿಸಲಾಗುತ್ತಿದೆ.

ಕೃಷ್ಣಾ ಹಾಗೂ ಕಾವೇರಿ ನೀರಿನ ಪೂರ್ಣ ಬಳಕೆ

೯೯. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಹಾಗೂ ಕಾವೇರಿ ನೀರನ್ನು ಪೂರ್ಣವಾಗಿ ಬಳಕೆ ಮಾಡಲು ಸರ್ಕಾರವು ಏನಾದರೂ ಯೋಜನೆ ರೂಪಿಸಿದೆಯೆ:

ಆ) ಹಾಗಿದ್ದಲ್ಲಿ ಅಂತಹ ಯೋಜನೆಯ ಸ್ವರೂಪ ಯೋಜನೆಯ ಗಾತ್ರ ಹಾಗೂ ಕಾರ್ಯಗತ ಮಾಡಲು ಕೈಕೊಂಡಿರುವ ಕ್ರಮಗಳೇನು?